**ದಿನಾಂಕ: 21.03.2025 ರಂದು ಸಾಕ್ಷಿ ಹಾಜರಿದ್ದು ಪ್ರಮಾಣಿಸಲಾಯಿತು.**

ಈ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹಿತ ದೃಷ್ಟಿಯಿಂದ ಮತ್ತು ವಾದಿ ಮತ್ತು ಪ್ರತಿವಾದಿ ಪರ ವಕೀಲರ ಹಿತ ದೃಷ್ಟಿಯಿಂದ, ಸಾಕ್ಷಿ ತಾನು ಯಾವ ರೀತಿ ಹೇಳಿಕೆ ನೀಡಿರುತ್ತಾರೆ ಎನ್ನುವುದನ್ನು ಪರಿಶೀಲಿಸಲು ಮತ್ತು ನಾನು ಈ ರೀತಿ ಹೇಳಿಕೆ ನೀಡಿಲ್ಲ ಎನ್ನುವುದನ್ನು ತಪ್ಪಿಸುವುದಕ್ಕಾಗಿ ಎರಡೂ ಬದಿಯಲ್ಲಿ ನೋಡಿಕೊಳ್ಳಲು ಎರಡೂ ಕಂಪ್ಯೂಟರ್ ಸ್ಕ್ರೀನ್ ಗಳನ್ನು ಅಳವಡಿಸಲಾಗಿದೆ.

**ಪಾಟೀ ಸವಾಲು:-** ಪ್ರತಿವಾದಿ ಪರ ಪಿ ಪಿ ವಕೀಲರಿಂದ :-

ನಾನು ಬಿ ಇ ಪದವಿಧರ. ಈಗ ವ್ಯಾಪಾರ ಮಾಡುತ್ತಿರುತ್ತೇನೆ. ಈ ದಾವೆಯನ್ನು ಬೇರೆಯವರು ಸ್ವತ್ತನ್ನು ಅತಿಕ್ರಮ ಮಾಡಲು ಪ್ರಯತ್ನ ಪಟ್ಟಿದ್ದರಿಂದ ಹಾಕಲಾಗುತ್ತದೆ. ದಾವಾ ಆಸ್ತಿಯ ವಿಸ್ತೀರ್ಣ ಪೂರ್ವ ಪಶ್ಚಿಮ - ದಕ್ಷಿಣದ ಕಡೆಗೆ 67 ಅಡಿ, ಉತ್ತರ ದಕ್ಷಿಣ - ಪೂರ್ವ ಭಾಗದ ಕಡೆಗೆ 90 ಅಡಿ ಇರುತ್ತದೆ. ಪೂರ್ವ ಪಶ್ಚಿಮ - ಉತ್ತರ ಭಾಗಕ್ಕೆ 40 ಅಡಿ, ನಾವು 1973 ರಿಂದ ದಾವಾ ಸ್ವತ್ತಿನ ಸ್ವಾಧೀನ ಹೊಂದಿರುತ್ತೇವೆ. ದಾವಾ ಸ್ವತ್ತಿಗೆ ಸಂಬಂಧಪಟ್ಟಂತೆ ಖರೀದಿ ಪತ್ರ ಆದ ನಂತರ Rectification Deed ಷೆಡ್ಯೂಲ್ ಗೆ ಸಂಬಂಧಪಟ್ಟಿರುವಂತೆ ಮಾಡಿಕೊಂಡಿರುತ್ತೇವೆ. ದಾವಾ ಸ್ವತ್ತಿನ ಪೂರ್ವಕ್ಕೆ ಅಪಾರ್ಟ್ ಮೆಂಟ್ಸ್ ಇರುತ್ತವೆ. ಸದರಿ ಅಪಾರ್ಟ್ ಮೆಂಟ್ಸ್ ನ್ನು ನಾನು ದಾವಾ ಸ್ವತ್ತನ್ನು ಖರೀದಿ ಮಾಡಿದ ನಂತರ ಕಟ್ಟಿರುತ್ತಾರೆ. ಪಶ್ಚಿಮಕ್ಕೆ ಬಿ ಬಿ ಎಂ ಪಿ ಸ್ವತ್ತು ಇರುತ್ತದೆ . ಪ್ರತಿವಾದಿ ಸ್ವತ್ತು ದಾವಾ ಸ್ವತ್ತಿನ ಅಕ್ಕ ಪಕ್ಕ ಇರುವುದಿಲ್ಲ. ಯಾವ ಕಾರಣಕ್ಕಾಗಿ ಪ್ರತಿವಾದಿ ವಿರುದ್ಧ ಈ ದಾವೆಯನ್ನು ಹಾಕಿದ್ದೀರಾ ಎನ್ನುವ ಪ್ರಶ್ನೆಗೆ ಸಾಕ್ಷಿದಾರರು ಯಾರೋ ಬಂದು ದಾವಾ ಸ್ವತ್ತಿನ ಪಶ್ಚಿಮಕ್ಕಿರುವ ಭಾಗವನ್ನು ಒಡೆದು ಹಾಕಲು ಪ್ರಯತ್ನ ಪಟ್ಟಿದ್ದರಿಂದ ದಾವೆ ಹಾಕಿರುತ್ತೇನೆ. 2021 ರಲ್ಲಿ ಯಾರು ಬಂದಿದ್ದರು ಎನ್ನುವ

ಪ್ರಶ್ನೆಗೆ ಸಾಕ್ಷಿದಾರರು ನ್ಯಾಯಾಲಯದಲಿಲರುವ ಪ್ರತಿವಾದಿಯರನ್ನು ತೋರಿಸಿ ಅವರು ಬಂದಿರುತ್ತಾರೆ ಎಂದು ನುಡಿದಿರುತ್ತಾರೆ.

**ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯವಕಾಶ ಕೋರಿದ್ದು ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನ ರೀತ್ಯಾ ದಾಖಲಿಸಿಕೊಳ್ಳಲಾಗಿದೆ.)

ಓ ಹೇ ಕೇ ಸರಿ ಇದೆ.

(ಲಕ್ಷ್ಮಣ ರಾಮು ಕುರಣೆ )
15 ನೇ ಅಪರ ನಗರ ಸಿವಿಲ್ ಮತ್ತು ಸತ್ರ
ನ್ಯಾಯಾಧೀಶರು, ಬೆಂಗಳೂರು.